# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ವೈ ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 798 |
| ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 12-12-2023. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬಳ್ಳಾರಿ ಜಿಲ್ಲೆಯಲ್ಲಿ Jeans Textile Park ಸ್ಥಾಪಿಸುವ ಬಗ್ಗೆ ಸರ್ಕಾರದಿಂದ ಇಲ್ಲಿಯ ವರೆಗೆ ಆಗಿರುವ ಕಾರ್ಯಪ್ರಗತಿ ಏನು; (ಸಂಪೂರ್ಣ ವಿವರ ನೀಡುವುದು) | ಬಳ್ಳಾರಿ ಜಿಲ್ಲೆಯಲ್ಲಿ Jeans Textile Park ಸ್ಥಾಪಿಸುವ ಬಗ್ಗೆ ಸರ್ಕಾರದಿಂದ ಇಲ್ಲಿಯವರೆಗೆ ಆಗಿರುವ ಕಾರ್ಯಪ್ರಗತಿ ವರದಿಯನ್ನು **ಅನುಬಂಧ**ದಲ್ಲಿ ಒದಗಿಸಿದೆ. |
| ಆ) | ಈ ಜಿನ್ಸ್ ಉದ್ಯಮದ ಟೆಕ್ಸ್ ಟೈಲ್ ಪಾರ್ಕ್ ಗಾಗಿ ಎಷ್ಟು ಭೂಮಿಯನ್ನು ಯಾವ ಸ್ಥಳದಲ್ಲಿ ಕಾಯ್ದಿರಿಸಲಾಗಿದೆ; ಯಾವ ಕಾಲಮಿತಿಯಲ್ಲಿ ಈ ಪಾರ್ಕ್ ನ್ನು ಪ್ರಾರಂಭಿಸಲಾಗುವುದು; (ವಿವರ ನೀಡುವುದು) | ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು KIADB ರವರಿಂದ ಆಲದಹಳ್ಳಿ ಗ್ರಾಮದ ಸರ್ವೆ ನಂ.122/ಎ ರ 50 ಎಕರೆ ಭೂಮಿಯನ್ನು ಜವಳಿ ಪಾರ್ಕ್ ಸ್ಥಾಪಿಸಲು ಬಳ್ಳಾರಿ ಗಾರ್ಮೆಂಟ್ ಎಕ್ಸ್ ಪೋರ್ಟ್ಸ್ ಕ್ಲಸ್ಟರ್ ಪ್ರೈ ಲಿ., ಬಳ್ಳಾರಿ ಈ ಸಂಸ್ಥೆಯವರಿಗೆ ಹಂಚಿಕೆ ಮಾಡಲಾಗಿರುತ್ತದೆ.<br><br>ಸದರಿ ಎಸ್.ಪಿ.ವಿ. ಮುಖಾಂತರ ಜವಳಿ ಪಾರ್ಕ್ ನ್ನು ಸ್ಥಾಪಿಸಲು ಅವಶ್ಯವಿರುವ ಪ್ರಾರಂಭಿಕ ಕ್ರಮಗಳು ಅಂದರೆ, ವಿವಿಧ ಇಲಾಖೆಗಳಿಂದ ಪ್ರಮಾಣ ಪತ್ರಗಳನ್ನು ಹಾಗೂ KIADB ಬೆಂಗಳೂರು ರವರಿಂದ ವಿವರವಾದ ಯೋಜನ ವರದಿಗೆ ಅನುಮೋದನೆಯನ್ನು ಪಡೆದ ನಂತರ ಪಾರ್ಕ್‌ನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುವುದು. |
| ಇ) | ಈ ಜಿನ್ಸ್ ಪಾರ್ಕ್ ನಿಂದ ಸ್ಥಳೀಯವಾಗಿ ಆಗುವ ಅನುಕೂಲಗಳೇನು? (ವಿವರ ನೀಡುವುದು) | ಜೀನ್ಸ್ ಪಾರ್ಕ್ ಸ್ಥಾಪನೆಯಿಂದ ಎಲ್ಲಾ ಘಟಕಗಳನ್ನು ಒಂದೇ ಸ್ಥಳದಲ್ಲಿ ಸ್ಥಾಪಿಸಿ ಉತ್ಪನ್ನಗಳ ಗುಣಮಟ್ಟದ ಹೆಚ್ಚಳ ಹಾಗೂ ಉತ್ಪಾದನಾ ವೆಚ್ಚ ಸಾಗಾಣಿಕೆ ವೆಚ್ಚ, Turnaround time ನ್ನು ಕಡಿಮೆಗೊಳಿಸಿ, ಸ್ಪರ್ಧಾತ್ಮಕ ದರದಲ್ಲಿ ಜೀನ್ಸ್ ಉತ್ಪನ್ನವನ್ನು ಮಾರುಕಟ್ಟೆಗೆ ಒದಗಿಸುವ ಉದ್ದೇಶ ಹೊಂದಲಾಗಿದೆ ಹಾಗೂ ಸ್ಥಳೀಯ ನಿರುದ್ಯೋಗಿ ಯುವಕ ಯುವತಿಯರಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಉದ್ಯೋಗ ಕಲ್ಪಿಸಲಾಗುವುದು. |

ಸಂಖ್ಯೆ: CI 144 JAKE 2023

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

## ಅನುಬಂಧ

- 2022-23ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ (272) ರಲ್ಲಿ ಬಳ್ಳಾರಿಯಲ್ಲಿ ಜೀನ್ಸ್ ಮತ್ತು ಉಡುಪುಗಳನ್ನು ಉತ್ತೇಜಿಸಲು ಟೆಕ್ಸ್‌ಟೈಲ್ ಪಾರ್ಕ್‌ನ್ನು ಪ್ರಾರಂಭಿಸಲು ಉದ್ದೇಶಿಸಿದೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಘೋಷಿಸಿರುತ್ತಾರೆ.
- ದಿನಾಂಕ:06.06.2022 ರಂದು ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಬಳ್ಳಾರಿ ಗಾರ್ಮೆಂಟ್ ಎಕ್ಸ್‌ಪೋರ್ಟ್ಸ್ ಕ್ಲಸ್ಟರ್ ಪ್ರೈ.ಲಿ., ಸಂಸ್ಥೆಯವರಿಗೆ ಕೆ.ಐ.ಎ.ಡಿ.ಬಿ ಯವರಿಂದ ನೀಡಿರುವ ಆಲದಹಳ್ಳಿ ಗ್ರಾಮದ ಸರ್ವೆ ನಂ.122/ಎ ರ ಭೂಮಿಯಲ್ಲಿ ಜವಳಿ ಪಾರ್ಕ್ ಸ್ಥಾಪಿಸುವ ಕುರಿತು ವಿಸ್ತಾರವಾಗಿ ಚರ್ಚಿಸಲಾಯಿತು. ಸದರಿ ಭೂಮಿಗೆ ಸಂಬಂಧಿಸಿದ ತಾಂತ್ರಿಕ ಅಡಚಣೆಯನ್ನು ಬಗೆಹರಿಸಿ, ಬಳ್ಳಾರಿ ಗಾರ್ಮೆಂಟ್ ಎಕ್ಸ್‌ಪೋರ್ಟ್ಸ್ ಕ್ಲಸ್ಟರ್ ಪ್ರೈ.ಲಿ., ಬಳ್ಳಾರಿ ಇವರಿಗೆ ಸದರಿ ಜಾಗದಲ್ಲಿ ಜವಳಿ ಪಾರ್ಕ್ ಸ್ಥಾಪಿಸಲು ಭೂ-ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಎಸ್.ಪಿ.ವಿ ರವರಿಗೆ ತಿಳಿಸಲಾಯಿತು. ಸದರಿ ಎಸ್.ಪಿ.ವಿ. ಕಂಪನಿಯು ದಿನಾಂಕ:12.01.2010 ರಂದು ನೊಂದಣಿಯಾಗಿರುತ್ತದೆ.
- ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಕೆ.ಐ.ಎ.ಡಿ.ಬಿ ಯವರಿಂದ ಆಲದಹಳ್ಳಿ ಗ್ರಾಮದ ಸರ್ವೆ ನಂ.122/ಎ ರ 50 ಎಕರೆ ಭೂಮಿಯನ್ನು ಜವಳಿ ಪಾರ್ಕ್ ಸ್ಥಾಪಿಸಲು ಬಳ್ಳಾರಿ ಗಾರ್ಮೆಂಟ್ ಎಕ್ಸ್ ಪೋರ್ಟ್ಸ್ ಕ್ಲಸ್ಟರ್ ಪ್ರೈ.ಲಿ., ಬಳ್ಳಾರಿ ಈ ಸಂಸ್ಥೆಯವರಿಗೆ ಹಂಚಿಕೆ ಮಾಡಲಾಗಿರುತ್ತದೆ. ಬಳ್ಳಾರಿ ಗಾರ್ಮೆಂಟ್ ಎಕ್ಸ್‌ಪೋರ್ಟ್ಸ್ ಕ್ಲಸ್ಟರ್ ಪ್ರೈ.ಲಿ., ಬಳ್ಳಾರಿ ರವರು 80 ಸದಸ್ಯರನ್ನು ಒಳಗೊಂಡು ಎಸ್.ಪಿ.ವಿ ಯಾಗಿ ನೊಂದಾಯಿಸಿಕೊಂಡು ಮುಂದೆ ಬಂದಿದ್ದು, ಸದರಿ ಎಸ್.ಪಿ.ವಿ ರವರಿಂದ ಈ ಜವಳಿ ಪಾರ್ಕ್ ನಲ್ಲಿ ಈ ಕೆಳಕಂಡ ಜವಳಿ ಆಧಾರಿತ ಘಟಕಗಳನ್ನು ಸ್ಥಾಪಿಸಲು ಉದ್ದೇಶ ಹೊಂದಲಾಗಿದೆ.

> ಜೀನ್ಸ್ & ಕಾಟನ್ ಸಿದ್ಧ ಉಡುಪು ತಯಾರಿಕಾ ಘಟಕಗಳು
> ಹೊಸೈರಿ, ಸಿದ್ಧ ಉಡುಪು ತಯಾರಿಕಾ ಘಟಕಗಳು
> ಸ್ಪಿನ್ನಿಂಗ್ (ನೂಲು ತಯಾರಿಸುವ) ಘಟಕಗಳು
> ಪವರ್‌ಲೂಮ್ ಘಟಕಗಳು
> ವಾಷಿಂಗ್ ಘಟಕಗಳು

- ಮೇಲಿನ ಎಲ್ಲಾ ಘಟಕಗಳನ್ನು ಒಂದೇ ಸ್ಥಳದಲ್ಲಿ ಸ್ಥಾಪಿಸಿ ಉತ್ಪನ್ನಗಳ ಗುಣಮಟ್ಟದ ಹೆಚ್ಚಳ ಹಾಗೂ ಉತ್ಪಾದನಾ ವೆಚ್ಚ, ಸಾಗಾಣಿಕೆ ವೆಚ್ಚ, Turnaround Time ನ್ನು ಕಡಿಮೆಗೊಳಿಸಿ, ಸ್ಪರ್ಧಾತ್ಮಕ ದರದಲ್ಲಿ ಜೀನ್ಸ್ ಉತ್ಪನ್ನವನ್ನು ಮಾರುಕಟ್ಟೆಗೆ ಒದಗಿಸುವ ಉದ್ದೇಶ ಹೊಂದಲಾಗಿದೆ. ಇದರಿಂದ ನಿರುದ್ಯೋಗಿ ಯುವಕ ಯುವತಿಯರಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಉದ್ಯೋಗ ಕಲ್ಪಿಸಲಾಗುವುದು.
- ಮುಂದುವರೆದು, Special Purpose Vehicle (SPV) ನವರು ಯೋಜನಾ ವರದಿಯನ್ನು (DPR) ಸಲ್ಲಿಸಲು ಅವಧಿ ವಿಸ್ತರಿಸಲು ಅನುಮತಿಗಾಗಿ ಕೆ.ಐ.ಎ.ಡಿ.ಬಿ. ರವರಿಗೆ ಪತ್ರ ಬರೆದಿರುತ್ತಾರೆ.
- ಬಳ್ಳಾರಿ ಗಾರ್ಮೆಂಟ್ ಎಕ್ಸ್‌ಪೋರ್ಟ್ಸ್ ಕ್ಲಸ್ಟರ್ ಪ್ರೈ.ಲಿ., ಎಸ್.ಪಿ.ವಿ ರವರು ಉಪ ನಿರ್ದೇಶಕರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಬಳ್ಳಾರಿರವರಿಗೆ ಬರೆದ ಪತ್ರದಲ್ಲಿ ವಿವರಿಸಿದಂತೆ ತ್ಯಾಜ್ಯ ಸಂಸ್ಕರಣಾ ಘಟಕವನ್ನು ಸದರಿ ಜಮೀನಿನಲ್ಲಿ ಸ್ಥಾಪಿಸಲು ಅನುಮತಿ ನೀಡಲು ಪತ್ರದಲ್ಲಿ ಕೋರಿರುತ್ತಾರೆ.
- ಸದರಿ ಜಮೀನಿನ ಪಹಣಿಯಲ್ಲಿ ಕೆ.ಐ.ಎ.ಡಿ.ಬಿ. ಹೆಸರಿನಲ್ಲಿದ್ದು, ಸದರಿ ಜಮೀನು ಕೆ.ಐ.ಎ.ಡಿ.ಬಿ ಯಿಂದ ಎಸ್.ಪಿ.ವಿ ರವರ ಹೆಸರಿಗೆ Mutation ಮಾಡಿಕೊಡುವ ಪ್ರಕ್ರಿಯೆ ತಹಶೀಲ್ದಾರ ಬಳ್ಳಾರಿ ರವರ ಕಚೇರಿಯಲ್ಲಿರುತ್ತದೆ.

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ
ನಿರ್ದೇಶಕರು, ಕೈಮಗ್ಗ ಮತ್ತು ಜವಳಿ